ಒಎಸ್–260/2002
ಪಿ.ಡಬ್ಲ್ಯೂ -3

ದಿಃ 09-02-2015 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಪಾಟೀ ಸವಾಲುಃ ಎರಡನೇ ಪ್ರತಿವಾದಿ ಪರ ವಕೀಲ ರವರಿಂದಃ

ನನ್ನ ಹೊಲದ ಸರ್ವೆ, ಚಕಬಂದಿ ನಂಬರ ಹೇಳಲು ಬರುವುದಿಲ್ಲ. ಮೃತ ಒಂದನೇ ಪ್ರತಿವಾದಿಗೆ ದಾವಾ ಆಸ್ತಿ ಬಿಟ್ಟು ಬೇರೆ ಆಸ್ತಿಗಳು ಇವೆ ಅವುಗಳ ಸರ್ವೆ ನಂಬರ ನನಗೆ ಗೊತ್ತಿಲ್ಲ. ಈಗ ನ್ಯಾಯಾಲಯದಲ್ಲಿರುವ ಮೂರನೇ ವಾದಿ ನನ್ನ ಅವ್ವ. ನಾವು ಮೂರು ಜನ ಅಣ್ಣ-ತಮ್ಮಂದಿರು. ಒಬ್ಬಳು ಸಹೋದರಿ ಚೂನವ್ವ. ಸಿದ್ಧವ್ವ ನನ್ನ ಸ್ವಂತ ಅಕ್ಕ ಎಂದರೇ ನಿಜ. ಈಗ ಸಿದ್ಧವ್ವ ಇಲ್ಲ. 15 ವರ್ಷಗಳ ಹಿಂದೆ ಅವಳು ಅನಾರೋಗ್ಯದ ಕಾರಣ ತೀರಿಕೊಂಡಿದ್ದಾಳೆ. ಸಿದ್ದವ್ವಳನ್ನು ಈ ಕೇಸಿನ ಮೃತ ಒಂದನೇ ಪ್ರತಿವಾದಿಗೆ ಜಾತಿ ಪದ್ಧತಿಯ ಪ್ರಕಾರ ಮದುವೆ ಮಾಡಿಕೊಟ್ಟಿದ್ದರು ಎಂದರೇ ಸುಳ್ಳು. ಮೃತ ಒಂದನೇ ಪ್ರತಿವಾದಿಗೆ ಒಬ್ಬಳೇ ಹೆಂಡತಿ. ಅವಳ ಹೆಸರು ಚೂನವ್ವ. ಮೃತ ಮೂರನೇ ವಾದಿ. ಸಿದ್ಧವ್ವ ತೀರಿಕೊಂಡ ನಂತರ ರಾಯಪ್ಪ ಚೂನವ್ವಳನ್ನು ಮದುವೆ ಆದ ಎಂದರೇ ಸುಳ್ಳು. (ಈ ಸುಮಯದಲ್ಲಿ ವಾದಿ ಪರ ವಕೀಲರು ಎರಡನೇ ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ರಾಯಪ್ಪ ಮತ್ತು ಚೂನವ್ವಳ ವೈವಾಹಿಕ ಸಂಬಂಧವನ್ನು ಅಲ್ಲಗಳೆದಿಲ್ಲ. ಆದ್ದರಿಂದ ವೈವಾಹಿಕ ಸಂಬಂಧದ ಪ್ರಶ್ನೆ ಕೇಳಲು ಬರುವುದಿಲ್ಲ ಎಂದು ತಕರಾರು ಮಾಡಿದ್ದಾರೆ. ಎರಡನೇ ಪ್ರತಿವಾದಿ ಪರ ವಕೀಲರು ನಾನು ಖರೀದಿದಾರ ಇರುವುದರಿಂದ ವಂಶಾವಳಿ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಹೇಳುವ ಪ್ರಶ್ನೆಯೇ ಇರುವುದಿಲ್ಲ ಎಂದಿದ್ದಾರೆ.)

ಚೂನವ್ವ ಮತ್ತು ರಾಯಪ್ಪರಿಗೆ 4 ಜನ ಮಕ್ಕಳು ಜನಿಸಿರುತ್ತಾರೆ. ಅವರು ಈಗಲೂ ಇದ್ದಾರೆ. ಅವರ ಯಾವಾಗ ಹುಟ್ಟಿದರು ಎಂದರೇ ಗೊತ್ತಿಲ್ಲ. ನಾನು ಮತ್ತು ಅಡಿವೆವ್ವ ಕೂಡಿಕೊಂಡು ಎರಡನೇ ಪ್ರತಿವಾದಿಯಾದ ನಿಂಗಪ್ಪನಿಗೆ ಆಸ್ತಿಯನ್ನು ಲುಕ್ಸಾನು ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ರಾಯಪ್ಪ ಸಾಯುವವರೆಗೂ ಚೂನವ್ವ ಮತ್ತು ಅವರ ಮಕ್ಕಳು ಎಲ್ಲರೂ ಸೇರಿ ಒಂದೇ ಮನೆಯಲ್ಲಿ ವಾಸಿಸುತ್ತಿದ್ದರು. ಮನೆಯ ವ್ಯವಹಾರವನ್ನು ರಾಯಪ್ಪ ಮಾಡುತ್ತಿದ್ದ. ಆತನ ಮದುವೆಯ ನಂತರ ಚೂನವ್ವ ಮನೆವ್ಯವಹಾರ ಮಾಡಹತ್ತಿದಳು. ಚೂನವ್ವ ಮನೆ ವ್ಯವಹಾರ ಮಾಡುತ್ತಿದ್ದಳು ಎನ್ನುವುದಕ್ಕೆ ಯಾವುದೇ ಕಾಗದ ಪತ್ರಗಳು ಇಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾಗದ ಪತ್ರಗಳನ್ನು ನೋಡಿಲ್ಲ. ರಾಯಪ್ಪ ದಾವಾ ಆಸ್ತಿಯನ್ನು ಖರೀದಿ ತೆಗೆದುಕೊಂಡಿದ್ದಾನೆ ಎಂದರೇ ಸರಿ. ರಾಯಪ್ಪ ದಾವಾ ಸ್ವತ್ತನ್ನು ಕೊಳ್ಳುವುದಕ್ಕೆ ಮೊದಲು ಯಾವಾಗ ತನ್ನ ಆಸ್ತಿಯನ್ನು ಮಾರಾಟ ಮಾಡಿದ ಎಂದು ಹೇಳಲು ಬರುವುದಿಲ್ಲ. ಮೊದಲ ಆಸ್ತಿಯನ್ನು ಮಾರಿದ ಎಷ್ಟು ವರ್ಷಗಳ ನಂತರ ದಾವಾ ಆಸ್ತಿಯನ್ನು ರಾಯಪ್ಪ ಖರೀದಿ ಮಾಡಿದ್ದಾನೆಂದು ಹೇಳಲು ಬರುವುದಿಲ್ಲ. ಮೊದಲು ಮಾರಾಟ ಮಾಡಿದ ಆಸ್ತಿಯ ಸರ್ವೆ ನಂಬರ ಹೇಳಲು ಬರುವುದಿಲ್ಲ. ರಾಯಪ್ಪನ ಉದ್ಯೋಗ ಒಕ್ಕಲುತನ. ರಾಯಪ್ಪನಿಗೆ ಕೊಲೆ ಕೇಸಿನಲ್ಲಿ ಶಿಕ್ಷೆ ಆಗಿತ್ತು ಎಂದರೇ ನನಗೆ ಗೊತ್ತಿಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ರಾಯಪ್ಪನಿಗೆ ಖರ್ಚು ಹೆಚ್ಚಿದ್ದು ಗಳಿಕೆ ಕಡಿಮೆ ಇತ್ತು ಎಂದರೇ ಸುಳ್ಳು. ನಾನೇ ಹೇಳಿ ಸಾಕ್ಷಿ ಪ್ರಮಾಣ ಪತ್ರವನ್ನು ಬರೆಸಿದ್ದೇನೆ. ಈ ನ್ಯಾಯಾಲಯದಲ್ಲಿ ಆದೇಶವಾದ ಬಗ್ಗೆ ಹೇಳಿ ಸಾಕ್ಷಿ ಪ್ರಮಾಣ ಪತ್ರವನ್ನು ಬರೆಸಿದ್ದೇನೆ. ಯಾವ ದಿನ, ಯಾರ ಮೇಲೆ, ಯಾವ ತರಹದ ಮನಾಯಿ ಆದೇಶ ಆಗಿತ್ತು ಎಂದರೇ ನನಗೆ ಗೊತ್ತಿಲ್ಲ. ಈ ಜಮೀನದಲ್ಲಿ ಕಬ್ಬು ಬೆಳೆಯುತ್ತದೆ ಎಂದರೇ ನಿಜ. ಆ ಬೆಳೆ ಎರಡನೇ ಪ್ರತಿವಾದಿಯ ಹೆಸರಿನಲ್ಲಿ ಶುಗರ್ ಕಾರ್ಖಾನೆಗೆ

ಹೋಗುತ್ತಿತ್ತು ಎಂದರೇ ಸರಿಯಲ್ಲ, ಉತಾರದಲ್ಲಿ ಎರಡನೇ ಪ್ರತಿವಾದಿಯ ಹೆಸರು ಇದೆ ಎಂದರೇ ನನಗೆ ಗೊತ್ತಿಲ್ಲ. ಈ ಜಮೀನದ ಮೇಲೆ ಎರಡನೇ ಪ್ರತಿವಾದಿ ಸಾಲ ತೆಗೆದಿದ್ದಾನೆ ಎಂದರೇ ನನಗೆ ಗೊತ್ತಿಲ್ಲ. ರಾಯಪ್ಪ ತನ್ನ ಅಡಚಣೆಗಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾನೆ ಎಂದರೇ ನನಗೆ ಗೊತ್ತಿಲ್ಲ. ಎರಡನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿ ಮಾಡುವ ಮುನ್ನ ರಾಯಪ್ಪನ ಹೆಸರು ಮಾತ್ರ ಇತ್ತು ಎಂದರೇ ನನಗೆ ಗೊತ್ತಿಲ್ಲ. ರಾಯಪ್ಪನಿಗೆ ಕುಡಿಯುವ, ಇಸ್ಪೆಟ ಆಡುವ ಚಟಗಳು ಇದ್ದವು. ನಾನು ಅವರ ಕೂಡ ಕುಡಿದಿದ್ದೇನೆ. ರಾಯಪ್ಪ ದಿನಕ್ಕೆ ಎಷ್ಟು ಖರ್ಚು ಮಾಡುತ್ತಿದ್ದ ಮತ್ತು ಎಷ್ಟು ಸಾಲ ಮಾಡಿದ್ದ ಎಂದರೇ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ರಾಯಪ್ಪನ ಹಿರಿಯರ ಆಸ್ತಿ ಅಲ್ಲ ಎಂದರೇ ನಿಜ. ದಾವಾ ಆಸ್ತಿಯ ಅಕ್ಕ-ಪಕ್ಕ ನನ್ನ ಜಮೀನು ಇಲ್ಲ. ಭೀಮಪ್ಪ ಲಗಮಪ್ಪ ಪಾಟೀಲನು ಬಳೋಬಾಳದವನು ಎಂದರೇ ನನಗೆ ಗೊತ್ತಿಲ್ಲ. ರಾಯಪ್ಪ ಕುಡಿದು ಅನಾರೋಗ್ಯದಿಂದ ಸತ್ತ. ರಾಯಪ್ಪ ಕುಡಿಯುತ್ತಿದ್ದ, ಅವನಿಗೆ ಚಟಗಳು ಇದ್ದವು ಎಂದು ಸುಳ್ಳು ಹೇಳುತ್ತೇನೆ ಎಂದರೇ ಸರಿಯಲ್ಲ. ರಾಯಪ್ಪನ ಸಾವು ಸ್ವಾಭಾವಿಕವಾದುದು ಎಂದರೇ ಸರಿಯಲ್ಲ. ನನ್ನ ತಾಯಿಯಾಗಲೀ ಚೂನವ್ವಳಾಗಲೀ, ನ್ಯಾಯಾಲಯದಲ್ಲಿ ಈ ದಾವೆ ಇದೆ ಎಂದು ದಿನಪತ್ರಿಕೆಯಲ್ಲಿ ಹಾಕಿಸಿಲ್ಲ ಎಂದರೇ ಸರಿ. ದಾವಾ ಸ್ವತ್ತಲ್ಲದೇ ಸರ್ವೆ ನಂಃ 117/15 ಜಮೀನು ಇತ್ತು ಎಂದರೇ ನನಗೆ ಗೊತ್ತಿಲ್ಲ. ನಮ್ಮ ತಾಯಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ಎರಡನೇ ಪ್ರತಿವಾದಿಯ ಕಬ್ಜಾದಲ್ಲಿ ದಾವಾ ಆಸ್ತಿ ಇದ್ದು ಅದರಲ್ಲಿ ಅವನೇ ಬೆಳೆ ಬೆಳೆಯುತ್ತಾನೆ ಎಂದರೇ ಸುಳ್ಳು. ದಾವಾ ಆಸ್ತಿ ರಾಯಪ್ಪನದು ಸ್ವಂತ ಆಸ್ತಿ ಇದ್ದು ಇದರಲ್ಲಿ ಮಕ್ಕಳ ಹಕ್ಕು ಇಲ್ಲ ಎಂದರೇ ಸುಳ್ಳು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ